ಅ) ಹೌದಂ ವ್ಯತ್ತರ ಕುಂಟುಬಕ್ಕೆ ಒಟ್ಟು ರೂ. ೧೮,೦೦೦–೦೦ಗಳನ್ನು ಎಕ್ಸ್‌ಗ್ರೇಷಿಯಾಗಿ ಕೊಡಲಾಗಿದೆ (ಪ್ರತಿ ಕುಟುಂಬಕ್ಕೂ ರೂ ೨,೦೦೦–೦೦ ಗಳಂತೆ ೯ ಕುಟುಂಬಕ್ಕೆ) ಕ್ಲೇಮ್ ಅರ್ಜಿಗಳು ಬಂದನಂತರ ಪ್ರತಿ ಕುಟುಂಬಕ್ಕೆ ರೂ. ೧೩,೦೦೦–೦೦ಗಳನ್ನು ಕೊಡಲಾಗುವುದು.

ಇ) ಚಾಲಕ ಅಥವಾ ನಿರ್ವಾಹಕರ ಕುಟುಂಬದವರಿಂದ ಕೆಲಸ ಕೋರಿ ಅರ್ಜಿಗಳೇ ಬಂದಿರುವುದಿಲ್ಲ.

ಬೆಂಗಳೂರು ಮೈಸೂರು ರಸ್ತೆಯಲ್ಲಿ ಅಪಘಾತಗಳ ಬಗ್ಗೆ ಸರ್ಕಾರದ ಕ್ರಮ

೩೫೩. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ತಾ ೧–೧–೮೭ ರಿಂದ ಡಿಸೆಂಬರ್ ಅಂತ್ಯದವರೆಗೆ ಸಂಭವಿಸಿರುವ ಅಪಘಾತಗಳ ಸಂಖ್ಯೆ ಎಷ್ಟು ಕೆಲವು ನಿರ್ದಿಷ್ಟ ಸ್ಥಳಗಳಲ್ಲಿಯೇ ಪದೇ ಪದೇ ಅಪಘಾತ ವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಆ) ಅಪಘಾತ ಸಂಭವಿಸುವ ಸ್ಥಳಗಳಿಗೆ ಸೂಚನೆಗಳಿಗೆ ಸೂಚನೆ ಫಲಕಗಳನ್ನು ಇಡಲಾಗಿದೆಯೆ ? ಇಟ್ಟಿದ್ದರೆ ಯಾವ ರೀತಿ ಇಡಲಾಗಿದೆ ಅಂತಹ ಸ್ಥಳಗಳಲ್ಲಿ ಸೂಚನೆ ಫಲಕಗಳಿಲ್ಲದಿದ್ದರೆ ಇಡಲಾಗುವುದೆ ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಈ ಅವಧಿಯಲ್ಲಿ ೬೧೩ ಅಪಘಾತಗಳು ಸಂಭವಿಸಿರುತ್ತವೆ. ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಪದೇ ಪದೇ ಅಪಘಾತಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಅಂತಹ ಮುಖ್ಯ ಸ್ಥಳಗಳಲ್ಲಿ ದಾರಿಯಂದ್ದಕ್ಕೂ ಸೂಚನಾ ಫಲಕಗಳನ್ನು ಇಡಲಾಗಿದೆ.

ಆ) ಐ.ಎಂ ವಿ. ಆಕ್ಟ್‌ನ ೯೦ನೇ ಷೆಡ್ಯೂಲ್‌ನಲ್ಲಿ ಕಲಂ ೬೫, ೬೭ ಮತ್ತು ೬೮ರ ಪ್ರಕಾರ ಸೂಚನಾ ಫಲಕಗಳನ್ನು ಇಡಲಾಗಿದೆ ರೋಡ್ ಹಂಪ್ಸ್‌ಗಳ ಜೊತೆಗೆ ಅಪಘಾತ ಸ್ಥಳ. ನಿಧಾನವಾಗಿ ಚಲಿಸಿ ಅಪಾಯ ತಿರುವು, ಶಾಲಾವಲಯ. ಕಡಿದಾದ ತಿರುವುದು, ನೋ ಓವರ್‌ಟೇಕಿಂಗ್, ಲೀವ್ ಅಲೀ ರೀಚ್ ಸೇಫಲಿ, ಸುರಕ್ಷತೆ ಮೊದಲು ಮತ್ತು ರಿಫ್ಲೆಕ್ಟರ್ ಫಲಕಗಳಲ್ಲಿ ಇಡಲಾಗಿದೆ.

ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

೩೫೪. ಶ್ರೀಮತಿ ಕೆ ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) ಶ್ರೀ ಎನ್. ಎಂ. ಅಡ್ಯಂತಾಯ (ಸುರಕ್ಕಲ್) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಹಾಗೂ ಇಲಾಖಾವಾರು ಮಾಹಿತಿ ಒದಗಿಸುವುದು).

ಆ) ಸದರಿ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ ಹಾಗೂ ಇವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆಯನ್ನು ಇಲಾಖಾವಾರು ಮಾಹಿತಿಯನ್ನು ಒಗತ್ತಿಸಿದ ಪಟ್ಟಿಯಲ್ಲಿ ಕೂಡಿಸಲಾಗಿದೆ. ಜಿಲ್ಲಾವಾರು ಮಾಹಿತಿ ಲಭ್ಯವಿಲ್ಲ.

ಆ) ಹುದ್ದೆಗಳು ಖಾಲಿ ಆಗುವುದು ಮತ್ತು ಅವುಗಳನ್ನು ಭರ್ತಿ ಮಾಡುವುದು ಒಂದು ನಿರಂತರ ಕ್ರಿಯೆ. ಸದರಿ ಹುದ್ದೆಗಳು ಎಂದಿನಿಂದ ಖಾಲಿ ಇವೆ ಎಂದು ಹೇಳಲಾಗುವುದಿಲ್ಲ. ಈ ಹುದ್ದೆಗಳನ್ನು ಭರ್ತಿಮಾಡಲು ವಿಶೇಷ ಆದೇಶವನ್ನು ಸೂಕ್ತವಾಗಿ ಪರಿಗಣಿಸಲಾಗಿದೆ